ತಯಾರಿಸುತ್ತಾರೆ ಎಂಬುದನ್ನೆಲ್ಲ ಹೇಳಿದರು. ಅಷ್ಟರಲ್ಲಿ ಕಾಫಿ ಬಂತು. ತಕ್ಷಣ ಪಾಟೀಲರು 'ನೀವು ತಿಂಡಿ ತೆಗೆದು ಪೂರ್ತಿ ಖಾಲಿ ಮಾಡಿ, ನನಗೆ ಒಂದು ಕಪ್ ಕಾಫಿ ಮಾತ್ರ ಸಾಕು!' ಎಂದರು.

ಮೂವರೂ ಒಂದೊಂದು 'ಕರದಂಟು' ಮತ್ತು ಎರಡೆರಡು ಚಕ್ಕುಲಿ ತಿಂದು ಮುಗಿಸುವ ತನಕ ಲೋಕಾಭಿರಾಮವಾದ ಮಾತುಕತೆ ನಡೆಯಿತು. ಆಮೇಲೆ ಪಾಟೀಲರೇ 'ಈಗ ಹೇಳಿ, ನೀವು ಯಾಕೆ ಇವರನ್ನು ಕರೆತಂದಿದ್ದೀರಿ' ಎಂದರು ಕುತೂಹಲ ತೋರಿಸುತ್ತ. ರಾಯರು ಸತೀಶ ಕುಲಕರ್ಣಿಯವರ ಪತ್ನಿ ಹೈಸ್ಕೂಲಿನಲ್ಲಿ ದುಡಿಯುತ್ತಿರುವ ವಿಷಯ ತಿಳಿಸಿ 'ಆಕೆ ಎಂ.ಎಯಲ್ಲಿ ಗೋಲ್ಡ್ ಮೆಡಲ್ ತೆಗೆದಿದ್ದಾರೆ ಸರ್. ಒಳ್ಳೆ ಪಾಠ ಮಾಡ್ತಾರೆ ಎಂಬ ಹೆಸರೂ ಇದೆ. ಇದೇ ಮೇ ತಿಂಗಳಲ್ಲಿ ನಮ್ಮ ಕಾಲೇಜಿನ ಕನ್ನಡ ವಿಭಾಗದಲ್ಲಿ ಮಂಜುನಾಥಯ್ಯನವರು ನಿವೃತ್ತರಾಗುತ್ತಾರೆ. ಆ ಸ್ಥಾನಕ್ಕೆ ಈಕೆಯನ್ನು ನೇಮಿಸಬೇಕು ಎಂದು ವಿನಂತಿ ಮಾಡಲು ಈ ದಂಪತಿಯನ್ನು ಕರೆತಂದಿದ್ದೇನೆ' ಎಂದರು.

ಪಾಟೀಲರು ಎರಡು ನಿಮಿಷ ಮಾತನಾಡಲಿಲ್ಲ. ಮೌನವಾಗಿಯೇ ಇದ್ದು ಆಮೇಲೆ, 'ನಮ್ಮ ಟ್ರಸ್ಟಿಗಳಲ್ಲಿ ಒಬ್ಬರು ತಮ್ಮ ಕ್ಯಾಂಡಿಡೇಟ್ ಇದ್ದಾರೆ ಅಂತ ಆಗಲೇ ನನ್ನಲ್ಲಿ ಹೇಳಿದ್ದಾರೆ. ಆ ಕ್ಯಾಂಡಿಡೇಟ್ ಎಂ.ಎ. ಜಸ್ಟ್ ಪಾಸಾದವರಂತೆ. ನನಗೆ ಅದು ಇಷ್ಟ ಇಲ್ಲ. ಆದರೂ ಟ್ರಸ್ಟಿ ಅಂದಮೇಲೆ ಸುಲಭದಲ್ಲಿ ಅವರ ಮಾತನ್ನು ತಳ್ಳಿ ಹಾಕುವ ಹಾಗಿಲ್ಲವಲ್ಲ' ಎಂದು ತಲೆ ತುರಿಸುತ್ತಾ, 'ಒಂದು ಕೆಲಸ ಮಾಡಿ, ಈಕೆ ಅಪ್ಲಿಕೇಶನ್ ಹಾಕಲಿ. ಇಂಟರ್‌ವ್ಯೂಗೂ ಬರಲಿ. ನಾನು ಅಲ್ಲಿ ಇರುತ್ತೇನೆ. ಕನ್ನಡ ವಿಭಾಗದ ಮುಖ್ಯಸ್ಥ ಮುದಿಗೌಡರೂ ಇರುತ್ತಾರೆ. ನೀವು ಇಂಗ್ಲಿಷ್ ಪ್ರಾಧ್ಯಾಪಕರು ಕಂ ಸಾಹಿತಿ ಅಂತ ನಿಮ್ಮನ್ನು ಸೆಲೆಕ್ಷನ್ ಕಮಿಟಿಯಲ್ಲಿ ಹಾಕುತ್ತೇನೆ. ಯಾಕೆ ನಿಮ್ಮನ್ನು ಸೆಲೆಕ್ಷನ್ ಕಮಿಟಿಯಲ್ಲಿ ಹಾಕಿದ್ದೀರಿ ಎಂದು ಯಾರೂ ನನ್ನನ್ನು ಪ್ರಶ್ನಿಸುವ ಹಾಗಿಲ್ಲ! ಅದು ನನಗೆ ಬಿಟ್ಟದ್ದು. ನೀವು ಮತ್ತು ಮುದಿಗೌಡರು ಈಕೆಗೆ ಹೆಚ್ಚು ಅಂಕ ಹಾಕಿ. ನಾನು ನಮ್ಮ ಟ್ರಸ್ಟಿಯ ಕ್ಯಾಂಡಿಡೇಟಿಗೂ ಈಕೆಗೂ ಸಮಾನ ಅಂಕ ಹಾಕ್ತೇನೆ. ಆಗ ಈಕೆ ಸೆಲೆಕ್ಷನ್ ಆಗ್ತಾರೆ. ಏನಂತೀರಿ?' ಎಂದರು.

ರಾಯರು, 'ನಿಮ್ಮ ಕೃಪೆ ಸರ್. ದೊಡ್ಡ ಮನಸ್ಸು ಮಾಡಿದಿರಿ' ಎಂದು ಕೈ ಮುಗಿದರು. ಪಾಟೀಲರು 'ಕೃಪೆ ಎಲ್ಲಿ ಬಂತು? ಯೋಗ್ಯತೆಯಲ್ಲಿ ಈಕೆಯೇ ಮುಂದಿದ್ದಾಳೆ. ಆ ನೆಲೆಯಲ್ಲಿ ಈ ಸೆಲೆಕ್ಷನ್?' ಎಂದರು.

ಮಂಜುನಾಥಯ್ಯ ನಿವೃತ್ತರಾದ ಬೆನ್ನಿಗೆ ಬಸವೇಶ್ವರ ಕಾಲೇಜ್ ಟ್ರಸ್ಟಿನಿಂದ ಕನ್ನಡ ವಿಭಾಗಕ್ಕೊಂದು ಅಧ್ಯಾಪಕರು ಬೇಕು ಎಂದು ಜಾಹೀರಾತು ನೀಡಲಾಯಿತು. ಇಂಟರ್‌ವ್ಯೂನ ಮುನ್ನಾದಿನ ಬೆಳಗ್ಗೆ ಕಾಲೇಜಿನ ಪ್ರಾಂಶುಪಾಲರನ್ನು ಕರೆಸಿದ ಪಾಟೀಲರು 'ಎಷ್ಟು ಅಪ್ಲಿಕೇಶನ್ ಬಂದಿವೆ?' ಎಂಬ ಮಾಹಿತಿ ಪಡೆದು 'ಇಂಟರ್‌ವ್ಯೂ ಕಮಿಟಿಯಲ್ಲಿ ನಾನಂತೂ ಇದ್ದೇ ಇರುತ್ತೇನೆ. ಮುದಿಗೌಡರ್ ಬೇಕೇಬೇಕು. ನಮ್ಮ ಶ್ರೀನಿವಾಸರಾಯರೂ ಇರಲಿ' ಎಂದರು. ಪ್ರಾಂಶುಪಾಲರು 'ಅವರು ಇಂಗ್ಲಿಷ್ ಪ್ರಾಧ್ಯಾಪಕರು ಸರ್. ಇದು ಕನ್ನಡ ವಿಭಾಗಕ್ಕೆ ಸೆಲೆಕ್ಷನ್ ಸರ್!' ಎಂದರು.

ಪಾಟೀಲರು 'ಎಸ್ ಮಿ. ಬಸವರಾಜ್' ಎಂದು ಪ್ರಾಂಶುಪಾಲರನ್ನು ಸಂಬೋಧಿಸುತ್ತಾ, 'ಶ್ರೀನಿವಾಸರಾವ್ ಈಗ ನಮ್ಮ ನಾಡಿನ ಪ್ರಖ್ಯಾತ ಸಾಹಿತಿಗಳಲ್ಲಿ ಒಬ್ಬರು. ಅವರು ಹೆಚ್ಚು ಪುಸ್ತಕ ಪ್ರಕಟಿಸದೇ ಇರಬಹುದಾದರೂ ಕಿ.ರಂ. ನಾಗರಾಜ್ ಅಂತ ಒಬ್ಬ ಹಿರಿಯ ಸಾಹಿತಿಯ ಹೆಸರು ಕೇಳಿದ್ದೀರಿ ತಾನೇ? ಅಂಥ ಸಾಹಿತಿ ಇವರು! ಇಂಗ್ಲಿಷ್ ಪ್ರಾಧ್ಯಾಪಕರಾದರೇನಾಯಿತು? ಸಾಹಿತ್ಯದ ವಿಚಾರಕ್ಕೆ ಬಂದಾಗ ಕನ್ನಡ ವಿಭಾಗದವರೂ ಇಂಥವರನ್ನು ಬಳಸಿಕೊಳ್ಳಬೇಕು. ದೆಟ್ ಈಸ್ ಅವರ್ ಪಾಲಿಸಿ, ಅಂಡರ್ ಸ್ಟಾಂಡ್?' ಎಂದರು.

ಪ್ರಾಂಶುಪಾಲರು ಹೊರಟು ಹೋದಮೇಲೆ ಮುದಿಗೌಡರನ್ನು ಮನೆಗೆ ಕರೆಸಿಕೊಂಡ ಪಾಟೀಲರು 'ನಾಳೆಯ ಇಂಟರ್‌ವ್ಯೂ ಕಮಿಟಿಯಲ್ಲಿ ನೀವಿದ್ದೀರಿ ಎಂದು ಗೊತ್ತು ತಾನೇ ನಿಮಗೆ?' ಎಂದು ಪ್ರಶ್ನಿಸಿ, 'ನೋಡಿ ನನ್ನ ಕ್ಯಾಂಡಿಡೇಟ್ ಜಯಂತಿ ಕುಲಕರ್ಣಿ. ಆಕೆ ನಮ್ಮ ಸತೀಶ ಕುಲಕರ್ಣಿಯವರ ಪತ್ನಿ. ಸತೀಶ ಈಸ್ ವೆರಿ ನೈಸ್ ಪರ್ಸನ್. ಯು ನೋ. ಅವರ ಶ್ರೀಮತಿ ರ್‍ಯಾಂಕ್ ಹೋಲ್ಡರಂತೆ. ಸೋ ಅವರಿಗೆ ಕೆಲಸ ಕೊಡುವುದು ನಮ್ಮ ಧರ್ಮ!' ಎಂದರು.

ಮುದಿಗೌಡರ್ 'ಸರಿ' ಎಂದು ನಮಸ್ಕರಿಸಿ ಎದ್ದು ನಿಂತರು. ಪಾಟೀಲರು 'ಇಪ್ಪತ್ತನಾಲ್ಕು ಕ್ಯಾಂಡಿಡೇಟ್ಸ್ ಇದ್ದಾರಂತೆ. ನಿಮ್ಮ ಅಂಕ ಈಕೆಗೆ ಟಾಪ್ ಲೆವಲ್ಲಿನಲ್ಲಿ ಇರಬೇಕು' ಎಂದರು.

ಮುದಿಗೌಡರ್ ಒಪ್ಪಿ ತಲೆದೂಗಿದರು. ಜಯಂತಿ ಕುಲಕರ್ಣಿ ಮಂಜುನಾಥಯ್ಯನವರಿಂದ ತೆರವಾದ ಸ್ಥಾನಕ್ಕೆ ಆಯ್ಕೆಯಾಗಿ ಬಸವೇಶ್ವರ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕಿಯಾಗಿ ನೇಮಕಗೊಂಡರು.

***

ಅರೆ ಎಚ್ಚರ ಅರೆ ನಿದ್ರೆಯ ಸ್ಥಿತಿಯಲ್ಲಿ ನಿನ್ನೆ ಬಂದು ಕೈ ಸೇರಿದ ಜಯಂತಿ ಕುಲಕರ್ಣಿಯವರ ಪತ್ರದಿಂದ ರಾಯರಿಗೆ ಆಕೆಯ ನೇಮಕಾತಿಯಿಂದ ಮೊದಲ್ಗೊಂಡು ಆಕೆ ಅನುಭವಿಸಿದ ಸುಖ ಮತ್ತು ಸಂಕಷ್ಟಗಳು ಕಣ್ಣ ಮುಂದೆ ಬಂದುವು. ಈಗ ಆಕೆಗೆ ಬಂದ ಸಂಕಷ್ಟಕ್ಕೆ ತನ್ನಿಂದ ಪರಿಹಾರ ಆಗುತ್ತದೆ ಎಂಬ ನಂಬಿಕೆ ಆಕೆಯದ್ದು. ಈ ಎರಡು ವರುಷಗಳಲ್ಲಿ ಅವಳ ಜೊತೆ ತನಗೆ ಫೋನು ಮತ್ತು ಪತ್ರ ಸಂಬಂಧ ಹೆಚ್ಚು ಇಲ್ಲದಿದ್ದರೂ 'ಇದೆ' ಎನ್ನುವಂತೆ ಆಕೆ ನಡಕೊಂಡದ್ದು ನೋಡಿ ರಾಯರಿಗೆ ಅವಳ ಬಗ್ಗೆ ಇರುವ ಅಭಿಮಾನ ಇಮ್ಮಡಿಸಿತು. ತಾನೊಮ್ಮೆ ರಾಂಪುರಕ್ಕೆ ಸಪತ್ನೀಕನಾಗಿ ಹೋಗಬೇಕಿತ್ತು. ಆ ಊರಿಗೆ 'ಗುಡ್ ಬೈ' ಹೇಳಿ ಹೊರಡುವಾಗ ನಾವು ದಂಪತಿಯನ್ನು ಕರೆಸಿದ್ದ ಆಕೆ ಒಬ್ಬಟ್ಟು, ಪಾಯಸದ ಊಟ ಹಾಕಿ 'ಬೇಡ' ಅಂದರೂ ನನಗೆ ಪ್ಯಾಂಟು ಶರ್ಟ್ ಇವಳಿಗೆ ರೇಶ್ಮೆ ಸೀರೆ ಕೊಟ್ಟು ಕಾಲು ಹಿಡಿದು ನಮಸ್ಕರಿಸಿದ್ದಳು.

'ಸರ್ ನೀವು ನನ್ನ ಗಂಡನ ನಿಜವಾದ ಮಾವನಾಗಿಯೇ ಇದ್ದವರು. ಅವರು ಸತ್ತು ಆಗಲೇ ಹದಿನೈದು ವರ್ಷಗಳಾಗಿವೆ. ಈ ಇಷ್ಟು ವರುಷಗಳಲ್ಲಿ ನಾನು ಅನಾಥೆ ಅಲ್ಲ ಎಂಬ ಭಾವವನ್ನು ನನ್ನಲ್ಲಿ ನೀವು ತುಂಬಿ ನನ್ನ ಮಗಳ ಮದುವೆಯಲ್ಲಿ ತಂದೆಯ ಸ್ಥಾನದಲ್ಲಿ ನಿಂತು ಮದುವೆ ಮಾಡಿಸಿ ಪುಣ್ಯ ಕಟ್ಟಿಕೊಂಡವರು. ಈ ಋಣ ಜನ್ಮಜನ್ಮಾಂತರದ್ದು. ಹಾಗಾಗಿ ನೀವು ಕನಿಷ್ಠ ಮೂರು ತಿಂಗಳಿಗೊಮ್ಮೆಯಾದರೂ ಇಲ್ಲಿಗೆ ಬರಬೇಕು. ಬರುವಾಗ ಈ ನನ್ನ ಅಕ್ಕ (ರಾಯರ ಪತ್ನಿ) ನನ್ನೂ ಕರಕೊಂಡು ಬಂದು ನಮ್ಮಲ್ಲೇ ಇರಬೇಕು' ಎಂದು ಆಕೆ ಆಶೀರ್ವಾದ ಬೇಡಿದ್ದಳು. ಆಗ ರಾಯರ ಕಣ್ಣು ಸಣ್ಣಗೆ ಹನಿಗೂಡಿತ್ತು. ಅವರು ಅದನ್ನು ತೋರಿಸಿಕೊಂಡರೆ ಜಯಂತಿ ಅತ್ತೇ ಬಿಡುತ್ತಾರೆ ಎಂಬುದನ್ನು ತರ್ಕಿಸಿ, 'ಖಂಡಿತ, ನಾನು ಎಲ್ಲಿದ್ದರೂ ನಿನ್ನನ್ನು ನೆನಪಿಸಿಕೊಳ್ಳುತ್ತೇನೆ' ಎಂದು ವಾಗ್ದಾನ ಮಾಡಿದ್ದರು.

ಆ ದಿನ ಜಯಂತಿ ತನ್ನ ಮನೆಯ ಗೇಟಿನ ತನಕ ಬಂದು ರಾಯರನ್ನು ಬೀಳ್ಕೊಟ್ಟಿದ್ದರು. ಆದರೆ ರಾಯರು ಮನೆಗೆ ಬರುತ್ತಲೇ ಸರೋಜಮ್ಮ 'ಎಂಥ ನಾಟಕ ರೀ ನಿಮ್ಮ ಜಯಂತಿ ಕುಲಕರ್ಣಿಯವರದ್ದು? ಪ್ಯಾಂಟು ಶರ್ಟು, ಈ ರೇಶ್ಮೆ ಸೀರೆ ಎಲ್ಲ ಯಾರಿಗೆ ಬೇಕು? ಈ ಊರಲ್ಲಿ ಇರುವಾಗಲೆಲ್ಲ ನೀವು ದಿನಕ್ಕೊಮ್ಮೆಯಾದರೂ ಅವಳ ಮನೆಗೆ ಹೋಗದೆ ಇದ್ದವರಲ್ಲ! ಅವಳಿಗೆ 'ಆ ಹೆಲ್ಪ್ ಬೇಕಂತೆ. ಈ ಹೆಲ್ಪ್ ಬೇಕಂತೆ' ಎಂದು ಆ ದರಿದ್ರ ಸತೀಶ ಕುಲಕರ್ಣಿ ಸತ್ತ ನಂತರ ನೀವು ಅವಳ ಚಾಕರಿ ಮಾಡಿದ್ದೇ ಮಾಡಿದ್ದು! ಅದನ್ನು ನೋಡಿ ನನಗೆ ರಾಮ ರಾಮಾ ಎನ್ನುವಷ್ಟು ನಾಚಿಕೆಯಾಗುತ್ತಿತ್ತು. ಯಾವಾಗ ನೋಡಿದರೂ ನಿಮ್ಮ ಬಾಯಲ್ಲಿ 'ಜಯಂತಿ' 'ಜಯಂತಿ' ಎನ್ನುವುದೇ ಧ್ಯಾನ. ಎಷ್ಟೋ ಬಾರಿ ನೀವು ಹಗಲು ಬಿಡಿ, ರಾತ್ರೆ ನಿದ್ರೆಯಲ್ಲೂ ಜಯಂತಿ ಎಂದದ್ದನ್ನು ನಾನು ಕೇಳಿಸಿಕೊಂಡಿದ್ದೇನೆ. ವಾರದಲ್ಲಿ ಒಂದೆರಡು ಬಾರಿಯಾದರೂ ನೀವು 'ಸರೋಜ' ಎಂದು ನನ್ನನ್ನು ಕರೆಯುವ ಬದಲು ಜಯಂತಿ ಎಂದು ಕರೆದದ್ದೇ ಹೆಚ್ಚು. ಅಂಥ ಆಕರ್ಷಣೆ ಏನ್ರೀ ಅವಳಲ್ಲಿ ನಿಮಗೆ?' ಎಂದು ತರಾಟೆಗೆ ತೆಗೆದುಕೊಂಡಿದ್ದರು.

ಇಂಥ ಆರೋಪಗಳು ಜಯಂತಿ ಬಸವೇಶ್ವರ ಕಾಲೇಜಿನಲ್ಲಿ ಪ್ರಾಧ್ಯಾಪಕಿಯಾಗಿ ಆಯ್ಕೆಯಾದ ದಿನದಿಂದಲೇ ರಾಯರ ಮನೆ ಯಲ್ಲಿ ಪ್ರಾರಂಭವಾಗಿತ್ತು. ಜ್ಯೋತಿಯ ಅಪಾಯಿಂಟ್ ಆದ ದಿನ ಸತೀಶ್ ಕುಲಕರ್ಣಿ ಕೊಟ್ಟ ಡ್ರೈಫ್ರೂಟ್ಸ್ ಮತ್ತು ಸ್ವೀಟಿನ ಪ್ಯಾಕೆಟ್ ಹಿಡಿದುಕೊಂಡು ರಾಯರು ಮನೆಗೆ ಬಂದು ಹೆಂಡತಿಯನ್ನು ಕರೆದು ಆ ಎರಡೂ ಪ್ಯಾಕೆಟನ್ನು ಅವಳ ಕೈಯಲ್ಲಿಟ್ಟು 'ಏನಿದೆ ಎಂದು ನೋಡು ಆ ಪ್ಯಾಕೆಟ್‌ಗಳಲ್ಲಿ?' ಎಂದು ಡ್ರೆಸ್ ಬದಲಾಯಿಸಲು ಒಳಗೆ ಹೋಗಿ ನೈಟ್ ಡ್ರೆಸ್ ಧರಿಸಿ ಬರುವಷ್ಟರಲ್ಲಿ ಎರಡು ಪ್ಯಾಕೆಟುಗಳನ್ನೂ ಬಿಡಿಸಿ ಕಣ್ತುಂಬ ನೋಡಿದ ಸರೋಜಮ್ಮ, ಅವುಗಳನ್ನು ರಾಯರ ಕೈಯಲ್ಲಿಟ್ಟು, 'ಒಂದು ಪ್ಯಾಕೆಟ್ ಗೋಡಂಬಿ, ಸುಮಾರು ಒಂದು ಕೆ.ಜಿ.ಯಷ್ಟು ಇದೆ. ಇನ್ನೊಂದರಲ್ಲಿ ಮಾಮೂಲಿ ಸ್ವೀಟ್ ಬಿಡಿ' ಎಂದು ಹೇಳಿ, 'ಇಷ್ಟನ್ನು ನೀವು ಯಾವತ್ತೂ ಮನೆಗೆ ತಂದವರಲ್ಲ. ಮತ್ತೆ ಹೇಗೆ ಬಂತು ಇದು?' ಎಂದು ಸಂಭ್ರಮಿಸಿದ್ದರು.

(ಸಶೇಷ)